ಆ) ಮತ್ತು ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತುಮಕೂರು ಜಿಲ್ಲೆಯ ರೈತರಿಗೆ ಬೇಸಾಯಕ್ಕೆ ಬೇಕಾಗುವ ವಿದ್ಯುಚ್ಛಕ್ತಿ ಒದಗಿಸುವಲ್ಲಿ ವಿಫಲವಾಗಿರುವುದಿಲ್ಲ. ರೋಸ್ಟರ್ ಪದ್ಧತಿಯನ್ನು ಅನುಸರಿಸಿ ವಿದ್ಯುಚ್ಛಕ್ತಿಯನ್ನು ಹೊಸ ಐ.ಪಿ. ಸೆಟ್‌ಗಳಿಗೆ ಕೊಡಲಾಗುತ್ತಿದೆ.

ಇ) ರಾಜ್ಯ ಸರ್ಕಾರವು ಸಾಮಾನ್ಯವಾಗಿ ನಿಗದಿ ಪಡಿಸಿರುವ 1992-93ರ ಐ.ಪಿ. ಸೆಟ್‌ನ ಗುರಿಯನ್ನು ಸಾಧಿಸಲು ಮಂಡಳಿಯು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಇದಕ್ಕೆ ಬೇಕಾದ ಹಲವಾರು ಪ್ರಸರಣಾ ಮಾರ್ಗ ಮತ್ತು ಸಬ್ ಸ್ಟೇಷನ್ ಕೆಲಸಗಳಲ್ಲಿ ಸುಧಾರಣೆ ಮತ್ತು ವಿಸ್ತರಣೆ ಕಾರ್ಯಕ್ರಮಗಳನ್ನು ಮಂಡಳಿಯು ಮಾಡುತ್ತಿದೆ.

ಮೂಡಬಿದರೆಯಲ್ಲಿ ತೋಟಗಾರಿಕೆಗೆ ಮಂಜೂರಾದ ಜಮೀನಿನ ವಿವರ

273 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆಯಲ್ಲಿ ತೋಟಗಾರಿಕೆ ಇಲಾಖೆಗೆ ಮಂಜೂರಾದ ಜಮೀನೆಷ್ಟು?

ಆ) ಇದರಲ್ಲಿ ಅಭಿವೃದ್ಧಿ ಕಾರ್ಯಗಳೇನಾದರೂ ಈ ತನಕ ಆಗಿದೆಯೇ?

ಇ) ಇತರ ಅಭಿವೃದ್ಧಿಗಾಗಿ ಯೋಜನೆ ಏನಾದರೂ ತಯಾರಾಗಿದೆಯೇ (ಅದರ ವಿವರಗಳನ್ನು ಕೊಡುವುದು)?

ಈ) ಈ ಯೋಜನೆಯನ್ನು ಯಾವಾಗ ಕಾರ್ಯಗತಗೊಳಿಸಲಾಗುವುದು?

ಉ) ಈ ಸ್ಥಳದಲ್ಲಿ ಅನಧಿಕೃತ ಆಕ್ರಮಣ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಕೈಗೊಂಡ / ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಯವರು) :

ಅ) 8.20 ಎಕರೆ

ಆ) ಇಲ್ಲ

ಇ) ಹೌದು. ಸುಮಾರು 6.02 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಐದು ವರ್ಷಗಳ ಅವಧಿಯಲ್ಲಿ ಕಾರ್ಯಗತಗೊಳಿಸಲು ತಯಾರಿಸಿದೆ. ಈ ಯೋಜನೆಯಲ್ಲಿ 6 ಎಕರೆ ಪ್ರದೇಶದಲ್ಲಿ ವಿವಿಧ ಜಾತಿಯ ಹಣ್ಣಿನ ತೋಟವನ್ನು ನಿರ್ಮಿಸುವುದು. ಒಂದು ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಾಣ ಮಾಡಲಾಗುವುದು. ಉಳಿದ ಪ್ರದೇಶದಲ್ಲಿ ಸಸ್ಯಾಭಿವೃದ್ಧಿ ಕಾರ್ಯಕ್ರಮ, ಕಾಮಗಾರಿ ಕೆಲಸಗಳಿಗೆ ಉಪಯೋಗಿಸಲು ಉದ್ದೇಶಿಸಲಾಗಿದೆ.

ಈ) ತೋಟಗಾರಿಕೆ ನಿರ್ದೇಶಕರು ಕಳುಹಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿದೆ.

ಉ) ಹೌದು. ಅತಿಕ್ರಮಣಕಾರರನ್ನು ನಿಯಮಾನುಸಾರ ಹೊರದೂಡಲು ಕ್ರಮ ಕೈಗೊಳ್ಳಲಾಗುವುದು.

ಸೇಡಂ ಕ್ಷೇತ್ರದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಸಂಖ್ಯೆ

292 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?